ಪಂಚಾಯತ್‌ಗಳ ಒಟ್ಟು ಸಂಖ್ಯೆ :175, ಜಿಲ್ಲಾಪಂಚಾಯತ್‌ಗಳ ಒಟ್ಟು ಸಂಖ್ಯೆ:20

ಇ)ಹೌದು.

ವಿಷಯ : – ಕಂದಾಯ ಇಲಾಖೆಯ ಎಸ್.ಸಿ. / ಎಸ್.ಟಿ.ಗ್ರಾಮ ಸಹಾಯಕರ ಸಂಬಳ

ಹೆಚ್ಚಿಸುವಬಗ್ಗೆ

ಶ್ರೀ ಕರಿಯಣ್ಣ(ಹೊಳೆಹೂನ್ನೂರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 339(413)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ)ಕಂದಾಯ ಇಲಾಖೆಯಲ್ಲಿ ಗ್ರಾಮ ಸಹಾಯಕರಾಗಿ ಬಹುತೇಕ ಜನ ಹರಿಜನ-ಗಿರಿಜನರೆ ಕೆಲಸ ಮಾಡುತ್ತಿದ್ದು ಇವರ ಸಂಬಳವನ್ನು ಹೆಚ್ಚಿಗೆ ಮಾಡುವ ಯೋಜನೆ ಏನಾದರೂ ಸರ್ಕಾರದವರಲ್ಲಿದೆಯೇ?

ಆ)ಈ ಗ್ರಾಮ ಸಹಾಯಕರು ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವುದರಿಂದ ಕಡೆಯ ಪಕ್ಷ ಇವರು ಜೀವನ ಮಾಡುವುದಕ್ಕಾದರೂ ಎಬದುಕುವುದಕ್ಕಾಗಿ) ಆಗುವಷ್ಟು ಸಂಬಳವನ್ನು ಕೊಡಲಾಗುವುದೇ?

ಶ್ರೀ ಎಂ. ರಾಜಶೇಖರಮೂರ್ತಿ

(ಕಂದಾಯ ಸಚಿವರು)

ಇಲ್ಲ.

ಮಾಸಿಕ ನಿಗದಿತ ಸಂಭಾವನೆ ರೂ.600.00ಗಳನ್ನು ನೀಡಲಾಗುತ್ತಿದೆ. ನಿಗದಿತ ಸಂಭಾವನೆಯನ್ನು ಹೆಚ್ಚಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

ವಿಷಯ : –ಮುಳಬಾಗಿಲು ಟೌನ್ ರಾಮಮಂದಿರ ಛತ್ರದಲ್ಲಿ ಡೈನಿಂಗ್ ಹಾಲ್ ಕಟ್ಟುವಿಕೆ ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ340(401)

ಶ್ರೀ ಎಂ.ವಿ. ವೆಂಕಟಪ್ಪ, (ಮುಳಬಾಗಿಲು)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ)ಮುಳಬಾಗಿಲು ಟೌನ್‌ನ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಶ್ರೀ ರಾಮಮಂದಿರದ ಛತ್ರದಲ್ಲಿ ಡೈನಿಂಗ್ ಹಾಲ್ ಕಟ್ಟಲು ದೇವಸ್ಥಾನದ ಸಮಿತಿಯವರು ನಿರ್ಧರಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವೇ?

ಆ)ಹಾಗಿದ್ದಲ್ಲಿ ದೇವಸ್ಥಾನಕ್ಕೆ ಸಂಬಂಧಪಟ್ಟ ಹಣದಲ್ಲೇ ಡೈನಿಂಗ್ ಹಾಲ್ ಕಟ್ಟುತ್ತೇವೆ ಎಂದು ತಿಳಿಸಿದ್ದಾಗ್ಯೂ ಸಹಾ ಸರ್ಕಾರದವರು ಇನ್ನೂ ಒಪ್ಪದಿರಲು ಕಾರಣವೇನು?

ಇ) ಡೈನಿಂಗ್ ಹಾಲ್ ಇಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗಿರುವ ಪ್ರಯುಕ್ತ ಆದಷ್ಟು ಬೇಗನೆ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವಂತಾಗಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೇ?

ಶ್ರೀ ಎಂ.ರಾಜಶೇಖರಮೂರ್ತಿ

(ಕಂದಾಯ ಸಚಿವರು)

ಹೌದು

ಸದರಿ ಕಾಮಗಾರಿಯ ಅಂದಾಜು ವೆಚ್ಚ ರೂ9.00 ಲಕ್ಷ ಆಗಬಹುದೆಂದು ಅಂದಾಜು ಪಟ್ಟಿ ತಯಾರಿಸಿದ್ದಾರೆ, ರೂ 4.00 ಲಕ್ಷ ದೇವಾಲಯದ ನಿಧಿಯಿಂದಲೂ, ಉಳಿದ ರೂ 5.00 ಲಕ್ಷ ಸರ್ಕಾರ ಅನುದಾನ ಕೇಳಲು ಸಮಿತಿಯವರು ನಿರ್ಧರಿಸಿದ್ದಾರೆ. ಸದರಿ ಅಂದಾಜು ಪಟ್ಟಿ ಮತ್ತು ನಕ್ಷೆಗೆ ನಿಯಮಾನುಸಾರ ತಾಂತ್ರಿಕ ಮಂಜೂರಾತಿಗಾಗಿ ಅಧೀಕ್ಷಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಬೆಂಗಳೂರು ಇವರಿಗೆ ಕಳುಹಿಸಲಾಗಿದೆ. ಅವರಿಂದ ಪ್ರಸ್ತಾವ ಬಂದ ನಂತರ ಪರಿಶೀಲಿಸಲಾಗುವುದು.

ಪ್ರಸ್ತಾವ ಬಂದ ನಂತರ ಪರಿಶೀಲಿಸಲಾಗುವುದು.

ವಿಷಯ : - ಅತೀ ವೃಷ್ಟಿಯಿಂದ ಹಾನಿಗೊಳಗಾದ ರೈತರಿಗೆ ಪರಿಹಾರ ನೀಡುವಲ್ಲಿ ವಿಳಂಬ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ನಂಖ್ಯೆ 341(399)

ಶ್ರೀ ಎಂ.ವಿ. ವೆಂಕಟಪ್ಪ(ಮುಳಬಾಗಿಲು)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1991-92ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯಲ್ಲಿ ಅತೀವೃಷ್ಟಿಯಿಂದ ಹಾನಿಗೊಳಗಾದ ಮನೆಗಳು, ಬೆಳೆಗಳು, ಬಾವಿಗಳು, ಪಂಪುಸೆಟ್ಟುಗಳು ಮತ್ತು ಜಾನುವಾರುಗಳೆಷ್ಟು?

ಆ) ಸದರಿ ವಿಷಯಗಳ ಬಗ್ಗೆ ಈವರೆವಿಗೆ ಸರ್ಕಾರ ಬಿಡುಗಡೆ ಮಾಡಿದ ಪರಿಹಾರದ ಮೊತ್ತವೆಷ್ಟು;

ಇ) ಈ ಜಿಲ್ಲೆಗೆ ಪರಿಹಾರ ಧನವಾಗಿ ಎಷ್ಟು ಮೊಬಲಗು ಬೇಕೆಂದು ಕೇಳಲಾಗಿತ್ತು;

ಈ) ಅತೀವೃಷ್ಟಿಯಿಂದ ಸಾರ್ವಜನಿಕ ಸರ್ಕಾರಿ ಕಟ್ಟಡ, ಕೆರೆ, ಶಾಲೆಗಳಿಗೆ ಆಗಿರುವ ನಷ್ಟವೆಷ್ಟು ಮತ್ತು ಸದರಿ ಆಸ್ತಿಗಳ ದುರಸ್ತಿಗಾಗಿ ಈವರೆವಿಗೆ ಬಿಡುಗಡೆ ಮಾಡಿದ ಪರಿಹಾರದ ಮೊಬಲಗೆಷ್ಟು;

ಉ) ಈ ಬಗ್ಗೆ ಇನ್ನೂ ಕೂಡಬೇಕಾಗಿರುವ ಪರಿಹಾರ ಧನವನ್ನು ಸರ್ಕಾರದವರು ಎಂದು ಬಿಡುಗಡೆ ಮಾಡುವರು?

ಶ್ರೀ ಎಂ. ರಾಜಶೇಖರಮೂರ್ತಿ

(ಕಂದಾಯ ಸಚಿವರು).

1991-92ನೇ ಸಾಲಿನಲ್ಲಿ ಅತೀವೃಷ್ಟಿಯಿಂದ ಹಾನಿಗೊಳಗಾದ ಆಸ್ತಿಗಳ ವಿವರ ಈ ಕೆಳಕಂಡಂತಿದೆ.

| | | | |
|---|---|---|---|
| ಅ) | 1 | ಪೂರ್ಣಬಿದ್ದ ಮನೆಗಳು | 9,760 |
| | 2 | ಭಾಗಶಃ ಬಿದ್ದ ಮನೆಗಳು | 49,255 |
| | 3 | ಹಾನಿಗೊಳಗಾದ ಬೆಳೆಗಳ ಪ್ರದೇಶದ ವಿಸ್ತೀರ್ಣ | 57,055 ಹೆಕ್ಟೇರ್ |